Akashvani: Bangalore
National Bulletin In Kannada
07.08.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
07.08.2026: 13.10hrs
**********

**ಮುಖ್ಯಾಂಶಗಳು:**

1. ರಾಷ್ಟ್ರೀಯ ಕೈಮಗ್ಗ ದಿನ; ೨೨ ಮಂದಿ ನೇಕಾರರಿಗೆ ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿ ಪ್ರದಾನ ಮಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು
2. ಸಂಸತ್ತಿನ ಉಭಯ ಸದನಗಳಲ್ಲಿ ಮುಂದುವರೆದ ವಿಪಕ್ಷಗಳ ಗದ್ದಲ; ಕಲಾಪ ಸೋಮವಾರಕ್ಕೆ ಮುಂದೂಡಿಕೆ
3. ಭಾರತ-ಚೀನಾ ಗಡಿ ವ್ಯವಹಾರಗಳ ಸಮಾಲೋಚನೆ ಮತ್ತು ಸಮನ್ವಯ ಕಾರ್ಯವಿಧಾನದ ೩೬ನೇ ಸಭೆ; ಗಡಿಯಾಚೆಗಿನ ಸಹಕಾರ ಕುರಿತು ಚರ್ಚೆ
4. ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್; ಭಾರತದ ಅಶ್ಮಿತಾ ಚಲಿಹಾ ಮತ್ತು ರಕ್ಷಿತಾ ರಾಮ್‌ರಾಜ್ ಸೆಮಿಫೈನಲ್ ಪ್ರವೇಶ
5. ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಗ್ರ್ಯಾಂಡ್ ಚೆಸ್ ಟೂರ್ ಸೇಂಟ್ ಲೂಯಿಸ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಪ್ರಶಸ್ತಿ

**********

೧೨ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಅಂಗವಾಗಿ ಜವಳಿ ಸಚಿವಾಲಯವು ಇಂದು ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಈ ವೇಳೆ ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಹಾಗೂ ರಾಜ್ಯ ಖಾತೆ ಸಚಿವ ಪಬಿತ್ರ ಮಾರ್ಗರೆಟಾ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ೨೦೨೪ನೇ ಸಾಲಿನ ಸಂತ ಕಬೀರ್ ಕೈಮಗ್ಗ ಪ್ರಶಸ್ತಿ ಹಾಗೂ ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿಗಳನ್ನು ೨೨ ಮಂದಿ ನೇಕಾರರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರದಾನ ಮಾಡಿದರು. ಇದೇ ವೇಳೆ ನಾಲ್ಕು ಸ್ಮರಣಾರ್ಥ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು.

೧೯೦೫ರ ಆಗಸ್ಟ್ ೭ರಂದು ಆರಂಭವಾದ ಸ್ವದೇಶಿ ಚಳವಳಿಯನ್ನು ಸ್ಮರಿಸುವ ಸಲುವಾಗಿ ಪ್ರತಿವರ್ಷ ಆಗಸ್ಟ್ ೭ರಂದು ರಾಷ್ಟ್ರೀಯ ಕೈಮಗ್ಗ ದಿನ ಆಚರಿಸಲಾಗುತ್ತದೆ.

**********

ನೀಟ್ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪ್ರತಿಭಟನೆ ಮೇಲಿನ ಪೊಲೀಸ್ ಕ್ರಮ ಸೇರಿದಂತೆ ವಿವಿಧ ವಿಷಯಗಳನ್ನು ಮುನ್ನೆಲೆಗೆ ತಂದು ವಿರೋಧ ಪಕ್ಷಗಳು ನಡೆಸಿದ ತೀವ್ರ ಗದ್ದಲದಿಂದಾಗಿ ಸಂಸತ್ತಿನ ಉಭಯ ಸದನಗಳ ಕಲಾಪಗಳನ್ನು ಸೋಮವಾರಕ್ಕೆ ಮುಂದೂಡಲಾಗಿದೆ.ಇಂದು ಬೆಳಿಗ್ಗೆ ೧೧ ಗಂಟೆಗೆ ಲೋಕಸಭೆ ಸಮಾವೇಶಗೊಳ್ಳುತ್ತಿದ್ದಂತೆ, ಲೋಕಸಭಾಧ್ಯಕ್ಷ ಓಂ ಬಿರ್ಲಾ ಕ್ವಿಟ್ ಇಂಡಿಯಾ ಚಳವಳಿಯ ೮೪ನೇ ವಾರ್ಷಿಕೋತ್ಸವದ ಅಂಗವಾಗಿ ಮಹಾತ್ಮ ಗಾಂಧೀಜಿ ಸೇರಿದಂತೆ ದೇಶದ ಸ್ವಾತಂತ್ರ್ಯ ಸಂಗ್ರಾಮದ ತಪಸ್ವಿಗಳು ಹಾಗೂ ಅಮರ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಬಳಿಕ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಳ್ಳಲು ಯತ್ನಿಸಿದಾಗ, ವಿದ್ಯಾರ್ಥಿಗಳ ಪ್ರತಿಭಟನೆ ಮೇಲಿನ ಪೊಲೀಸ್ ಕ್ರಮದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಹೇಳಿಕೆಗೆ ಆಗ್ರಹಿಸಿ ವಿಪಕ್ಷ ಸದಸ್ಯರು ಗದ್ದಲ ಎಬ್ಬಿಸಿದರು. ಪ್ರಶೋತ್ತರ ಕಲಾಪ ಸಂಸತ್ತಿನ ಮುಖ್ಯ ಅಂಗ ಎಂದು ಸಭಾಧ್ಯಕ್ಷರು ಮನವರಿಕೆ ಮಾಡಲು ಯತ್ನಿಸಿದರೂ ಕಲಾಪಕ್ಕೆ ಅಡ್ಡಿ ಉಂಟಾದ ಹಿನ್ನೆಲೆ ಮೊದಲಿಗೆ ಮಧ್ಯಾಹ್ನ ೧೨ ಗಂಟೆಯವರೆಗೆ ಸದನವನ್ನು ಮುಂದೂಡಲಾಯಿತು. ಮತ್ತೊಂದೆಡೆ, ರಾಜ್ಯಸಭೆಯಲ್ಲೂ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ಕ್ವಿಟ್ ಇಂಡಿಯಾ ಚಳವಳಿಯ ಐತಿಹಾಸಿಕ ಮಹತ್ವವನ್ನು ಸ್ಮರಿಸಿ ಹುತಾತ್ಮರಿಗೆ ಗೌರವ ನಮನ ಸಲ್ಲಿಸಿದರು. ಬಳಿಕ ಸಚಿವರು ವಿವಿಧ ಇಲಾಖಾ ಸಂಬಂಧಿತ ಸಂಸದೀಯ ಕಾಯಂ ಸಮಿತಿಗಳ ವರದಿಗಳನ್ನು ಸದನದಲ್ಲಿ ಮಂಡಿಸಿದರು. ಶೂನ್ಯ ವೇಳೆಯ ಸಂದರ್ಭದಲ್ಲಿ ವಿಪಕ್ಷಗಳ ಘೋಷಣೆ ಮತ್ತು ಗದ್ದಲ ಮುಂದುವರಿದ ಕಾರಣ ಸಭಾಪತಿಯವರು ರಾಜ್ಯಸಭೆಯನ್ನು ಮೊದಲಿಗೆ ಮಧ್ಯಾಹ್ನ ೧೨ ಗಂಟೆಗೆ ನಂತರ ದಿನದ ಮಟ್ಟಿಗೆ ಮುಂದೂಡಿದರು.

**********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ತಮ್ಮ ನಿವಾಸದಲ್ಲಿ ಎನ್‌ಡಿಎಗೆ ಇತ್ತೀಚೆಗೆ ಸೇರ್ಪಡೆಗೊಂಡ ವಿವಿಧ ಪಕ್ಷಗಳ ಸಂಸದರೊಂದಿಗೆ ಉಪಾಹಾರ ಕೂಟ ಹಾಗೂ ಸಭೆ

ಆಯೋಜಿಸಿದ್ದರು. ಎನ್‌ಸಿಪಿಐ ಮತ್ತು ಶಿವಸೇನೆಯ ಸಂಸದರು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ಬಳಿಕ ಸಂಸತ್ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಸೇನೆ ಸಂಸದೆ ಜ್ಯೋತಿ ಸಾವಿತ್ರಿ ನಾಗನಾಥ್ ವಾಘ್ಮಾರೆ, ಸಂಸತ್ತಿನಲ್ಲಿ ಪದೇಪದೆ ನಡೆಯುವ ಅಡಚಣೆಗಳಿಂದ ಹೊಸದಾಗಿ ಆಯ್ಕೆಯಾದ ಹಾಗೂ ಪ್ರತಿಭಾವಂತ ಸಂಸದರಿಗೆ ತಮ್ಮ ಅಭಿಪ್ರಾಯ ಮಂಡಿಸಲು ಅವಕಾಶ ಸಿಗುತ್ತಿಲ್ಲ ಎಂದು ಪ್ರಧಾನಿ ಕಳವಳ ವ್ಯಕ್ತಪಡಿಸಿರುವುದಾಗಿ ತಿಳಿಸಿದರು. ಎನ್‌ಡಿಎಗೆ ಸಂಬಂಧಿಸಿದ ಎಲ್ಲರನ್ನು ಪ್ರಧಾನಿ ಮೋದಿ ಸ್ವಾಗತಿಸಿ, ರಾಷ್ಟ್ರ ನಿರ್ಮಾಣದಲ್ಲಿ ಸಂಸದರು ಪರಿಣಾಮಕಾರಿಯಾಗಿ ಹೇಗೆ ಕೊಡುಗೆ ನೀಡಬೇಕು ಎಂಬುದರ ಕುರಿತು ಮಾರ್ಗದರ್ಶನ ನೀಡಿದರು ಎಂದು ಎನ್‌ಸಿಪಿಐ ಸಂಸದೆ ಶತಾಬ್ದಿ ರಾಯ್ ಹೇಳಿದ್ದಾರೆ.

**********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆ ಭಾರತೀಯ ತಂತ್ರಜ್ಞಾನ ಸಂಸ್ಥೆ-ಐಐಟಿ ದೆಹಲಿಯ ೫೭ನೇ ಘಟಿಕೋತ್ಸವ ಸಮಾರಂಭವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ೫೮೭ ಪಿಎಚ್‌ಡಿ ವಿದ್ಯಾರ್ಥಿಗಳು ಸೇರಿದಂತೆ ೩ ಸಾವಿರಕ್ಕೂ ಹೆಚ್ಚು ಪದವೀಧರರು ಸಮಾರಂಭದಲ್ಲಿ ಪದವಿ ಸ್ವೀಕರಿಸಲಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರಾಷ್ಟ್ರಪತಿ ಚಿನ್ನದ ಪದಕ, ನಿರ್ದೇಶಕರ ಚಿನ್ನದ ಪದಕ, ಶಂಕರ್ ದಯಾಳ್ ಶರ್ಮಾ ಚಿನ್ನದ ಪದಕ ಸೇರಿದಂತೆ ವಿವಿಧ ಗೌರವಗಳನ್ನು ಪ್ರಧಾನಿ ಪ್ರದಾನ ಮಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಐಐಟಿ ದೆಹಲಿಯ ಸೋನಿಪತ್ ಆವರಣದಲ್ಲಿ ಸ್ಥಾಪಿಸಿರುವ ಕೃತಕ ಬುದ್ಧಿಮತ್ತೆ ಆಧಾರಿತ ಉನ್ನತ ಕಾರ್ಯಕ್ಷಮತೆಯ ಸೂಪರ್‌ಕಂಪ್ಯೂಟಿಂಗ್ ಸೌಲಭ್ಯ 'ಪರಂ ಪ್ರಗ್ಯಾ'ವನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ.

**********

ಭಾರತ ಮತ್ತು ಚೀನಾ ನವದೆಹಲಿಯಲ್ಲಿ ನಿನ್ನೆ ನಡೆದ ಗಡಿ ವ್ಯವಹಾರಗಳ ಸಮಾಲೋಚನೆ ಮತ್ತು ಸಮನ್ವಯ ಕಾರ್ಯವಿಧಾನದ ೩೯ನೇ ಸಭೆಯಲ್ಲಿ ವಾಸ್ತವಿಕ ನಿಯಂತ್ರಣ ರೇಖೆಯ ಪರಿಸ್ಥಿತಿಯನ್ನು ಪರಿಶೀಲಿಸಿ, ಮುಕ್ತ ಚರ್ಚೆ ನಡೆಸಿವೆ. ಈ ಕುರಿತು ಇಂದು ಹೇಳಿಕೆ ಬಿಡುಗಡೆಗೊಳಿಸಿರುವ ಸಚಿವಾಲಯ, ಗಡಿ ಗುರುತಿಸುವಿಕೆ, ಗಡಿ ನಿರ್ವಹಣೆ, ಕಾರ್ಯವಿಧಾನಗಳ ನಿರ್ಮಾಣ ಹಾಗೂ ಗಡಿಯಾಚೆಗಿನ ಸಹಕಾರ ಸೇರಿದಂತೆ ವಿವಿಧ ವಿಷಯಗಳ ಕುರಿತು ಉಭಯ

ದೇಶಗಳು ಚರ್ಚಿಸಿವೆ. ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವುದು ದ್ವಿಪಕ್ಷೀಯ ಬಾಂಧವ್ಯದ ಸಮಗ್ರ ಅಭಿವೃದ್ಧಿಗೆ ಅಗತ್ಯ ಎಂಬುದನ್ನು ಒತ್ತಿ ಹೇಳಲಾಗಿದೆ ಎಂದು ತಿಳಿಸಿದೆ.

**********

ಮಾದಕ ದ್ರವ್ಯ ಕಳ್ಳಸಾಗಣೆ ತಡೆ ಹಾಗೂ ರಾಸಾಯನಿಕಗಳ ಅಕ್ರಮ ದುರ್ಬಳಕೆ ತಡೆಯುವ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸುವ ಉದ್ದೇಶದಿಂದ ಮಾದಕ ವಸ್ತು ನಿಯಂತ್ರಣ ಸಂಸ್ಥೆ-ಎನ್‌ಸಿಬಿ ನವದೆಹಲಿಯಲ್ಲಿ 'ಭಾರತ-ಅಮೆರಿಕ ಮಾದಕ ವಸ್ತು ವಿರೋಧಿ ಕಾರ್ಯಾಕಾರಿ ಗುಂಪಿ ಸಭೆಯ ಕಾರ್ಯಾಚರಣೆ ಸಭೆಯನ್ನು ಆಯೋಜಿಸಿತ್ತು. ನಿನ್ನೆ ಹೈಬ್ರಿಡ್ ಮಾದರಿಯಲ್ಲಿ ನಡೆದ ಈ ಉನ್ನತ ಮಟ್ಟದ ಸಭೆಯಲ್ಲಿ ಎರಡೂ ದೇಶಗಳ ಪ್ರಮುಖ ತನಿಖಾ ಹಾಗೂ ಆಡಳಿತಾತ್ಮಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಮಾದಕ ದ್ರವ್ಯ ತಡೆ ಕಾರ್ಯಾಚರಣೆಯ ಸಹಕಾರ, ನಿಯಂತ್ರಣ ಚೌಕಟ್ಟು ಹಾಗೂ ಸಾಮರ್ಥ್ಯ ವೃದ್ಧಿಯ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾದಕ ದ್ರವ್ಯ ಜಾಲವನ್ನು ಧ್ವಂಸಗೊಳಿಸಲು ನೈಜ-ಸಮಯದ ಮಾಹಿತಿ ವಿನಿಮಯ ಮತ್ತು ಜಂಟಿ ತನಿಖೆಗಳ ಅಗತ್ಯತೆಯನ್ನು ಉಭಯ ದೇಶಗಳು ಪ್ರತಿಪಾದಿಸಿವೆ.

**********

ಕವಿ ಗುರುದೇವ ರವೀಂದ್ರನಾಥ ಠಾಗೋರ್ ಅವರ ಪುಣ್ಯತಿಥಿಯಂದು ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಗೌರವ ನಮನ ಸಲ್ಲಿಸಿದ್ದಾರೆ. ಠಾಗೋರ್ ತಮ್ಮ ಬರಹಗಳ ಮೂಲಕ ಭಾರತದ ಆತ್ಮಕ್ಕೆ ಧ್ವನಿ ನೀಡಿ, ಸ್ವಾತಂತ್ರ್ಯ ಚಳವಳಿಯಲ್ಲಿ ಹೊಸ ಜಾಗೃತಿ ಮೂಡಿಸಿದರು ಎಂದು ಅವರು ಹೇಳಿದ್ದಾರೆ. ಟ್ಯಾಗೋರ್ ಅವರ ಅಮರ ಕೃತಿ 'ಜನ ಗಣ ಮನ' ದೇಶದ ಏಕೀಕೃತ ಪ್ರಜ್ಞೆ ಮತ್ತು ಸ್ವಾಭಿಮಾನದ ಸಂಕೇತವಾಗಿದೆ. ವಿಶ್ವಭಾರತಿ ವಿಶ್ವವಿದ್ಯಾಲಯ ಸ್ಥಾಪಿಸುವ ಮೂಲಕ ಭಾರತೀಯ ಸಂಸ್ಕೃತಿ, ತತ್ವಶಾಸ್ತ್ರ ಮತ್ತು ಶಿಕ್ಷಣದ ಕೀರ್ತಿಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದರು ಎಂದು ಸಚಿವರು ಸ್ಮರಿಸಿದ್ದಾರೆ.

**********

ನೀಟ್-ಯುಜಿ ೨೦೨೪ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ-ಎನ್‌ಟಿಎ ತೀವ್ರ ಭದ್ರತಾ ಲೋಪಗಳನ್ನು ಸಿಬಿಐ ತನ್ನ ದೋಷಾರೋಪ ಪಟ್ಟಿಯಲ್ಲಿ ಬಹಿರಂಗಪಡಿಸಿದೆ. ಗೋಪ್ಯ ವಿಭಾಗದಲ್ಲಿ ದೈಹಿಕ ತಪಾಸಣೆ ಮತ್ತು ಲೈವ್ ಸಿಸಿಟಿವಿ ಉಸ್ತುವಾರಿ ಇಲ್ಲದಿದ್ದುದನ್ನು ದುರ್ಬಳಕೆ ಮಾಡಿಕೊಂಡ ಎನ್‌ಟಿಎಯ ಮೂವರು ವಿಷಯ ತಜ್ಞರು, ಮೇ ೩ ರ ಪರೀಕ್ಷೆಗೂ ಮುನ್ನವೇ ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಭೌತಶಾಸ್ತ್ರದ ಪ್ರಶ್ನೆಗಳನ್ನು ಕಾಗದದ ಚೂರುಗಳಲ್ಲಿ ಹಾಗೂ ನೆನಪಿನಲ್ಲಿಟ್ಟುಕೊಂಡು ಹೊರಸಾಗಿಸಿದ್ದಾರೆ ಎಂದು ಆರೋಪಿಸಲಾಗಿದೆ.ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ೧೩ ಆರೋಪಿಗಳ ವಿರುದ್ಧ ರೌಸ್ ಅವೆನ್ಯೂ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

**********

ದಕ್ಷಿಣ ಕೊರಿಯಾದ ಅಸಾನ್‌ನಲ್ಲಿ ನಡೆಯುತ್ತಿರುವ ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಅಶ್ಮಿತಾ ಚಲಿಹಾ ಮತ್ತು ರಕ್ಷಿತಾ ರಾಮ್‌ರಾಜ್ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿಂದು ಅಶ್ಮಿತಾ ಜಪಾನ್‌ನ ಹಿನಾ ಅಕೆಚಿ ವಿರುದ್ಧ ೨೦-೨೨, ೨೧-೧೫, ೨೧-೧೯ ಸೆಟ್‌ಗಳ ಅಂತರದಲ್ಲಿ ಭರ್ಜರಿ ಜಯ ಸಾಧಿಸಿದರೆ, ರಕ್ಷಿತಾ ರಾಮ್‌ರಾಜ್ ಭಾರತದವರೇ ಆದ ತಾನ್ವಿ ಶರ್ಮಾ ಅವರನ್ನು ೧೮-೨೧, ೨೧-೧೯, ೨೧-೧೮ ಅಂತರದಲ್ಲಿ ಮಣಿಸಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದ್ದಾರೆ.

**********

ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ, ಅಮೆರಿಕದಲ್ಲಿ ನಡೆದ ಗ್ರ್ಯಾಂಡ್ ಚೆಸ್ ಟೂರ್ ಸೇಂಟ್ ಲೂಯಿಸ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಪ್ರಶಸ್ತಿ ಗೆದ್ದಿದ್ದಾರೆ. ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ಜವೊಖಿರ್ ಸಿಂದರೋವ್ ವಿರುದ್ಧದ ಅಂತಿಮ ಹಂತದ ಪಂದ್ಯದಲ್ಲಿ ಡ್ರಾ ಸಾಧಿಸುವ ಮೂಲಕ ಪ್ರಜ್ಞಾನಂದ ೩೫ರಲ್ಲಿ ೨೩ ಅಂಕಗಳೊಂದಿಗೆ ಚಾಂಪಿಯನ್‌ಶಿಪ್ ಗೆದ್ದರು. ಐದು ದಿನಗಳ ಟೂರ್ನಿಯಲ್ಲಿ ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡಿದ್ದ ಪ್ರಜ್ಞಾನಂದ ಅವರಿಗೆ ಸಿಂದರೋವ್ ತೀವ್ರ ಪೈಪೋಟಿ ನೀಡಿದರೂ, ೧.೫ ಅಂಕಗಳ ಅಂತರದಿಂದ ರನ್ನರ್‌ಅಪ್ ಸ್ಥಾನಕ್ಕೆ

ತೃಪ್ತಿಪಡಬೇಕಾಯಿತು. ಜೂನ್‌ನಲ್ಲಿ ಓಸ್ಲೋದಲ್ಲಿ ನಡೆದ ನಾರ್ವೆ ಚೆಸ್-೨೦೨೪ ಪ್ರಶಸ್ತಿಯನ್ನೂ ಪ್ರಜ್ಞಾನಂದ ಗೆದ್ದಿದ್ದರು.

*****END*****